ಎಂ.ವಿ.ಸಿ - 808/2023
ಪಿ.ಡಬ್ಲ್ಯು - 01

**ದಿನಾಂಕ : 29-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತಕ್ಕೂ ನನ್ನ ಮಗನ ಈಗಿನ ಪರಿಸ್ಥಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗ ಮೊದಲು ಅಪಘಾತದಿಂದ ಬಿದ್ದು ಗಾಯಗೊಂಡಿದ್ದರು ನಂತರ ಬಿದ್ದರು. ಈಗ ನನ್ನ ಮಗ ಬಿದ್ದಿದರಿಂದ ಆ ರೀತಿ ಆಗಿರುತ್ತಾನೆ . ನನ್ನ ಮಗ ಮನೆಯಲ್ಲಿ ಆ ರೀತಿ ಬಿದ್ದಿರುತ್ತಾನೆ .

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ . ಆದ್ದರಿಂದ ಯಾರ ತಪ್ಪಿನಿಂದ ಅಪಘಾತ ಆಗಿದೆ ಎಂದು ನನಗೆ ಸ್ವತಃ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅಪಘಾತ ದ ಬಗ್ಗೆ ನಾನು ಕೇಳಿ ತಿಳಿದುಕೊಂಡಿರುತ್ತೇನೆ . ಸದಾಶಿವ ಎನ್ನುವವರು ನನಗೆ ಅಪಘಾತದ ಬಗ್ಗೆ ಮತ್ತು ಯಾರ ತಪ್ಪಿನಿಂದ ಅಪಘಾತ ಆಯಿತು ಎಂದು ನನಗೆ ಹೇಳಿರುತ್ತಾರೆ. ಸದಾಶಿವ ಹೇಳಿದ ಮಾಹಿತಿಯ ಆದಾರದ ಮೇಲೆ ನಾನು ಅಪಘಾತದ ಬಗ್ಗೆ ಸಾಕ್ಷ್ಯ ನುಡಿಯುತಿದ್ದೇನೆ. 1 ನೇ ಎದುರುದಾರರ ವಾಹನನಿಂದ ಈ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಬೈಕಿನ ಹಿಂಬದಿಯಲ್ಲಿ ಕುಳಿತಿದ್ದು ಒಂದನೇ ಎದುರುದಾರ ಬೈಕನ್ನು ಚಲಾಯಿಸಿ ಸ್ಕಿಡ್ ಆಗಿ ಬಿದ್ದಿದ್ದ. ನನ್ನ ಮಗನೇ ಬೈಕನ್ನು ಚಲಾಯಿಸುತಿದ್ದ ಎಂದರೆ ಸರಿಯಲ್ಲ. ನನ್ನ ಮಗನಿಗೆ ಲೈಸೆನ್ಸ್ ಇಲ್ಲದೇ ಇದ್ದುದರಿಂದ ನನ್ನ ಮಗನನ್ನು ಪಿಲನ್ ರೈಡರ್ ಆಗಿದ್ದ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ 3 ಮತ್ತು 4 ನೇ ಪ್ಯಾರಾದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ .

ನನ್ನ ಮಗನಿಗೆ ಸಂಬಂದಪಟ್ಟ ಆಸ್ಪತ್ರೆಯ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನನ್ನ ಮಗನಿಗೆ ಖರ್ಚು ಮಾಡಿದ ಹಣ ಯಾವುದೇ ಕಂಪನಿಯಿಂದ ವಾಪಸ್ಸು ಬಂದಿಲ್ಲ . ನಾವು ಮೆಡಿಸಿನ್ ಖರ್ಚು ಮಾಡಿದಾಗ ಆಸ್ಪತ್ರೆಯವರು paid ಎಂದು ಸೀಲು ಹಾಕಿರುತಾರೆ ಎಂದರೆ ಸರಿ . ನಾನು ಹಾಜರುಪಡಿಸಿರುವ ಎಲ್ಲಾ ಬಿಲ್ಲುಗಳಲ್ಲಿ paid ಎಂದು ಸೀಲು ಇಲ್ಲ ಎಂದರೆ ಸಾಕ್ಷಿ ನಾವು ಹಣ ಕಟ್ಟಿದ್ದೇನೆ ಅವರು ಹಾಕಿಲ್ಲ ಎಂದು ತಿಳಿಸಿರುತ್ತಾರೆ . paid ಎಂದು ಇಲ್ಲದೇ ಇರುವ ಬಿಲ್ಲುಗಳನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಆ್ಯಂಬುಲೆನ್ಸ್ ಗೆ ರೂ 1500 ಮತ್ತು ಆದರ್ಶ ಆಸ್ಪತ್ರೆಗೆ ಹೊಗಲು ಪ್ರತಿಭಾರಿ ರೂ 1500 ಖರ್ಚು ಮಾಡಿದ್ದೇವೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಯಾವುದೇ ಪೌಷ್ಟಿಕ ಆಹಾರದ ಅಗತ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ನಾವು ನನ್ನ ಮಗನಿಗೆ ಪೌಷ್ಟಿಕ ಆಹಾರಕ್ಕಾಗಿ ಪ್ರತಿ ದಿನ ಖರ್ಚು ಮಾಡಿದ್ದೇವೆ ಎಂದರೆ ಸರಿಯಲ್ಲ.

ಅಪಘಾತ ದ ಮೊದಲು ನನ್ನ ಮಗ ಸ್ವಂತವಾಗಿ ಸೆಂಟ್ರಿಕ್ ಕೆಲಸ ಮಾಡುತಿದ್ದ . ನನ್ನ ಮಗ ಸೆಂಟ್ರಿಕ್ ಕೆಲಸ ಮಾಡುತಿದ್ದ ಎನ್ನುವ ಬಗ್ಗೆ ದಾಖಲೆ ಇಲ್ಲ. ಆದರೇ ನನ್ನ ಮಗ ಸೆಂಟ್ರಿಕ್ ಕೆಲಸ ಮಾಡುವುದನ್ನು ನಾನು ನೋಡಿರುತ್ತೇನೆ. ಯಾರ ಮನೆಯ ಸೆಂಟ್ರಿಕ್ ಕೆಲಸ ಮಾಡಿದ್ದಾನೆ ಎಂದು ನನಗೆ ಗೊತ್ತಿಲ್ಲ . ನನ್ನ ಮಗ ಸೆಂಟ್ರಿಕ್ ಕೆಲಸ ಮಾಡುತಿದ್ದ ಎಂದು ನ್ಯಾಯಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಿಂದ ಆದ ಗಾಯಗಳ ನಂತರ  ನನ್ನ ಮಗನಿಗೆ ಸರಿಯಾಗಿ ನಡೆಯಲು ಆಗುತ್ತಿರಲಿಲ್ಲ ನಂತರ ಒಂದು ವರ್ಷದ  ನಂತರ ನನ್ನ ಮಗ ಮನೆಯಲ್ಲಿ ಪುನಃ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿರುತ್ತಾನೆ . ಅಪಘಾತ ದಿಂದ ನನ್ನ ಮಗನಿಗೆ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ.  ಅದರಿಂದ ನನ್ನ ಮಗನಿಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ.  ನನ್ನ ಮಗ ನ್ಯಾಯಲಯಕ್ಕೆ ಬಂದರೇ ಸತ್ಯ ಗೊತ್ತಾಗುತ್ತದೆ ಎಂದು ನಾನು ನ್ಯಾಯಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.   2 ಎದುರುದಾರರು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.